ಅಸಲು ದಾವೆ ನಂ.36/2019

ಡಿ.ಡಬ್ಲೂಃ 4-  ಶಾಂತಪ್ಪ ಬಿನ್ ಹನುಮಂತಯ್ಯ

ದಿನಾಂಕಃ 09/07/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು  ವಾದಿ ಪರವಾಗಿ ಶ್ರೀ ಸಿ. ಎನ್ . ಸಿ  ವಕೀಲರಿಂದ</u>**

1. ನಾನು ಹುಟ್ಟಿದಾಗಿನಿಂದ ಬೋಕಿಕೆರೆಯಲ್ಲಿ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ . ನನಗೆ ವಾದಿ ಪರಿಚಯ ಇರುತ್ತದೆ. ವಾದಿಯು ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ದಾಖಲಿಸಿರುತ್ತಾರೆ ಮತ್ತು ದಾವೆಯಲ್ಲಿ ಎನು ಪರಿಹಾರ ಕೇಳಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಅದೇ ರೀತಿ ಪ್ರತಿವಾದಿಯರು ಈ ದಾವೆಯಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು. ಸಮನ್ಸ್ ಮೇರೆಗೆ ನಾನು ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬರುವುದಕ್ಕೂ ಮುಂಚೆ ಈ ದಾವೆಯ ವಿಚಾರಗಳನ್ನು ಯಾರಿಂದಲೂ ತಿಳಿದುಕೊಂಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಸಮಯದಲ್ಲಿ ವಕೀಲರು ನನಗೆ ಪ್ರಶ್ನೆ ಮಾಡಿದ್ದನ್ನು ನಾನು ಉತ್ತರಿಸಿರುತ್ತೇನೆ ಮತ್ತು ಊರಿನಲ್ಲಿ ಆದ ಪಂಚಾಯತಿ ಬಗ್ಗೆ ನನಗೆ ಗೊತ್ತಿದ್ದು ಅದರ ಆಧಾರದ ಮೇಲೆ ನಾನು ನನ್ನ ಸಾಕ್ಷ್ಯ ನುಡಿದಿರುತ್ತೇನೆ.

2. ವಾದಿಯ ಗಂಡನ ಹೆಸರು ತಿಮ್ಮಪ್ಪ ಆಗಿರುತ್ತದೆ. ಸದರಿ ತಿಮ್ಮಪ್ಪನ ತಂದೆಯ ಹೆಸರು ಗಿರಿಯಪ್ಪ ಎಂದರೆ ಸರಿ. ಸದರಿ ತಿಮ್ಮಪ್ಪ ಮತ್ತು ಗಿರಿಯಪ್ಪನವರು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ತಿಮ್ಮಪ್ಪನವರು ವಾದಿಯನ್ನು ಕಾನೂನು ಬದ್ಧವಾಗಿ ಹಿರಿಯ ಸಮಕ್ಷಮ ಮದುವೆ ಆಗಿರುತ್ತಾರೆ ಎಂದರೆ ಸರಿ. ವಾದಿಗೆ ಒಬ್ಬ ಮಗ ಇದ್ದನು ಎಂದರೆ ಸರಿ. ವಾದಿ ಬದುಕಿರುವಾಗ ಅವರ ಗಂಡ ತಿಮ್ಮಪ್ಪನವರು ಕರಿಯಮ್ಮ ಎಂಬುವರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ಬಗ್ಗೆ ಗಲಾಟೆ ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ತಿಮ್ಮಪ್ಪ ಅಂದರೆ ಎರಡನೇ ಪ್ರತಿವಾದಿಯ ತಮ್ಮ ನಾಲ್ಕನೇ ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದಂತೆ ಗಲಾಟೆ ಆದ ನಂತರ ವಾದಿಯು ತಮ್ಮ ನಾಲ್ಕು ವರ್ಷದ ಮಗನನ್ನು ಕರೆದು ಕೊಂಡುಹೋಗಿ ಎರಡನೇ ಪ್ರತಿವಾದಿಯಿಂದ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ವಾದಿಯ ಮಗ ಮರಣ ಹೊಂದಿದ ನಂತರ ವಾದಿ ಮತ್ತು ಎರಡನೇ ಪ್ರತಿವಾದಿ ಮಧ್ಯೆ ಜೀವನಾಂಶಕ್ಕೆ ಸಂಬಂಧಿಸಿ ಊರಲ್ಲಿ ಒಂದು ಪಂಚಾಯತಿ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಪಂಚಾಯತಿ ಯಾವಾಗ ನಡೆದಿತ್ತು ಎಂದು ನನಗೆ ದಿನಾಂಕ ಹೇಳಲಾಗುವುದಿಲ್ಲ. ಸದರಿ ಪಂಚಾಯತಿಲ್ಲಿ ಗ್ರಾಮದವರು ಸುಮಾರು 100 ಕ್ಕಿಂತ ಹೆಚ್ಚಿನ ಜನರು ಸೇರಿಸಿದ್ದರು.

3. ನಾನು 2010 ರಲ್ಲಿ ದೊಡ್ಡಬೋಕಿಕೆರೆ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿದ್ದೆ. ನಾನು ಗ್ರಾಮದಲ್ಲಿ ಪಂಚನಾಗಿ ತೀರ್ಮಾನಗಳನ್ನು ಮಾಡುತ್ತಿದ್ದೆ ಆದರೆ ಎಷ್ಟು ಗಲಾಟೆಗಳಲ್ಲಿ ತೀರ್ಮಾನ ಎಂದು ಹೇಳಲು ಬರುವುದಿಲ್ಲ. ನಾನು ನನ್ನ ಹಿಂದಿನ ವಿಚಾರಣೆಯ ಸಮಯದಲ್ಲಿ ಎರಡನೇ ಪ್ರತಿವಾದಿಯು ವಾದಿಗೆ 1-2 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ ಎಂದು ಹೇಳಿದ್ದು ಅದನ್ನು ಜೀವನಾಂಶದ ರೂಪದಲ್ಲಿ ಕೊಟ್ಟಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲೆಗಳನ್ನು ಬರೆಯಲಾಗಿರುವುದಿಲ್ಲ ಮತ್ತು ನೋಂದಣಿ ಮಾಡಲಾಗಿರುವುದಿಲ್ಲ. ಸದರಿ ಹಣ ಕೊಡುವಾಗ ನಾನು ಎರಡನೇ ಪ್ರತಿವಾದಿಗೆ ನ್ಯಾಯಾಲಯದಲ್ಲಿ ಜೀವನಾಂಶಕ್ಕಾ ಗಿ ವಾದಿಯ ಹೆಸರಿನಿಂದ ಒಂದು ಪ್ರಕರಣ ದಾಖಲಿಸಿಕೊಂಡು ನಂತರ ಪ್ರಕರಣದಲ್ಲಿ ಜೀವನಾಂಶದ ಹಣ ಕೊಡಿ ಎಂದು ನಾನು ಸಲಹೆ ಕೊಟ್ಟಿರುವುದಿಲ್ಲ. ವಾದಿಯು ಕರಿಯಮ್ಮ ಮಹಿಳೆಯ ವಿಚಾರವಾಗಿ ಎರಡನೇ ಪ್ರತಿವಾದಿಯ ಜೊತೆ ಗಲಾಟೆ ಮಾಡಿ ನಾಲ್ಕು ವರ್ಷದ ಮಗುವನ್ನು ಕರೆದುಕೊಂಡು ಊರಿನಿಂದ ಹೋಗಿ ತಮ್ಮ ತವರು ಮನೆಯಲ್ಲಿ ವಾಸವಾಗಿದ್ದು ನಂತರ ಯಾವತ್ತೂ ಎರಡನೇ ಪ್ರತಿವಾದಿಯ ಊರಿಗೆ ಹೋಗಿರುವುದಿಲ್ಲ, ಅವರ ಮಧ್ಯೆ ಜೀವನಾಂಶದ ವಿಚಾರವಾಗಿ ಯಾವುದೇ ಪಂಚಾಯತಿಯಾಗಿರುವುದಿಲ್ಲ ಮತ್ತು ಎರಡನೇ ಪ್ರತಿವಾದಿಯ ವಾದಿಗೆ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

4. ಎರಡನೇ ಪ್ರತಿವಾದಿಯು ಕರಿಯಮ್ಮ ಜೊತೆ ಎರಡನೇ ಮದುವೆ ಆಗಿದ್ದರು ಎಜಂದು ನಾನು ಕೇಳಿರುತ್ತೇನೆ ಆದರೆ ಅದು ನಿಜವಾಗಿರುತ್ತದೆಯೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ಸದರಿ ಯಾವುದೇ ಮದುವೆಗೆ ಹೋಗಿರುವುದಿಲ್ಲ. ಈಗ ಸುಮಾರು 20-25 ವರ್ಷಗಳಿಂದ ವಾದಿಯು ಎರಡನೇ ಪ್ರತಿವಾದಿಯಿಂದ ದೂರವಾಗಿ ವಾಸವಾಗಿರುತ್ತಾರೆ. ಎರಡನೇ ಪ್ರತಿವಾದಿಯು ವಾದಿಗೆ ಹಣ ಕೊಡುವಾಗ ಬಹಳಷ್ಟು ಜನರು ಹಾಜರಿದ್ದರು , ಅವರ ಪೈಕಿ ಸಣ್ಣತಿಮ್ಮಪ್ಪ , ಲಕ್ಷ್ಮಪ್ಪ, ಎರಡನೇ ಪ್ರತಿವಾದಿಯ ಅಣ್ಣ-ತಮ್ಮಂದಿರು, ಕೆಂಚಪ್ಪ ಮುಂತಾದವರು ಇದ್ದರು. ಈ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಎರಡನೇ ಪ್ರತಿವಾದಿಯು ವಾದಿಗೆ ಜೀವನಾಂಶದ ರೂಪದಲ್ಲಿ ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ ಸ್ವತ್ತುಗಳು ಒಂದನೇ ಪ್ರತಿವಾದಿಯ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ಹಾಗಾಗಿ ಸದರಿ ಸ್ವತ್ತುಗಳಲ್ಲಿ ವಾದಿಗೆ ಕಾನೂನು ಬದ್ಧವಾದ ಹಿಸ್ಸೆ ಹಕ್ಕು ಇರುತ್ತದೆ ಎಂದರೆ ಸರಿ . ನನಗೆ ಈ ದಾವೆಯ ವಿಚಾರಗಳು ಗೊತ್ತಿಲ್ಲದಿದ್ದರೂ ಸಹ ನಾನು ಪ್ರತಿವಾದಿಯರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

**Sd**/-

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,

ತರೀಕೆರೆ .